"ಸ್ಮಿತಾ! ನಿನಗೆ ವಿಷ್ಯ ಗೊತ್ತಾಯ್ತಾ! ಸಿಡುಕು ಮೋರೆ ಸಿದ್ಲಿಂಗನ ಮದ್ವೆ ಫಿಕ್ಸ್ ಆಯ್ತಂತೆ ಕಣೆ!"

"ಹೌದೇನೆ ಗೀತಾ? ಅಲ್ವೇ, ಅದ್ಯಾವಳಪ್ಪಾ ಇಂಥಾ ಗೂಬೆ ಕಟ್ಕೊಳ್ಳೋಕೆ ಒಪ್ಪಿಕೊಂಡಿರೋಳು?"

"ಅಯ್ಯೋ! ಅದೆಲ್ಲಾ ನಮಗ್ಯಾಕೆ? ಬಾ ಹೋಗಿ ಸ್ವೀಟ್ ಕೇಳಾಣ!"

"ಆ ಕಮಂಗಿ ಸ್ವೀಟ್ ಕೊಡಿಸುತ್ತಾ? ನಿನಗೆಲ್ಲೋ ಭ್ರಮೆ."

ಈ ರೀತಿಯಾಗಿ ಖಾಸಗಿ ಬ್ಯಾಂಕೊಂದರಲ್ಲಿ ಲಲನಾಮಣಿಗಳಿಬ್ಬರು ತಮ್ಮ ಮ್ಯಾನೇಜರ್ ಬಗ್ಗೆ ಆಡಿಕೊಳ್ತಾ ಇದ್ದರು.

ಆ ಮ್ಯಾನೇಜರ್ ಹೆಸರು – ಸಿದ್ದಲಿಂಗ ಸ್ವಾಮಿ ಎಂಬುದಾಗಿತ್ತು. ಆತನು ಮೂವತ್ತು ವರ್ಷ ದಾಟಿದ್ದರೂ ಇನ್ನೂ ಮದುವೆಯಾಗದೇ ಇರುವಂಥ ಬ್ರಹ್ಮಚಾರಿ ಸಜ್ಜನನಾಗಿದ್ದನು. ಆರ್ಥಿಕವಾಗಿ ಸಬಲನಾಗಿದ್ದರೂ ದೈಹಿಕವಾಗಿ ನರಪೇತಲನಾಗಿದ್ದು, ಲೋಕದ ದೃಷ್ಟಿಯಲ್ಲಿ ಕುರೂಪಿ ಎಂದೆನಿಸಿಕೊಂಡವನಾಗಿ ಅಗಣಿತ ಕನ್ಯಾಮಣಿಗಳಿಂದ ತಿರಸ್ಕರಿಸಲ್ಪಟ್ಟು ಗೃಹಸ್ಥನಾಗದೆ ಉಳಿದು ತನ್ನ ತಾಯಿಯ ಸಂಕಟಕ್ಕೆ ಕಾರಣೀಭೂತನಾಗಿದ್ದನು. ಬಾಲ್ಯಕಾಲದಿಂದಲೇ ಪೋಲಿಯೋ ಪೀಡಿತನಾಗಿದ್ದ ಸಿದ್ಲಿಂಗನು ತನ್ನ ಎಡಗಾಲನ್ನು ಕೊಂಚವೇ ಎಳೆಯುತ್ತಾ ನಡೆಯುವವನಾಗಿದ್ದನು.

ಇಷ್ಟೆಲ್ಲ ದೈಹಿಕ ಅವಗುಣಗಳಿದ್ದರೂ ಕನ್ನಡದ ಉದ್ದಾಮ ಲೇಖಕರ ವಿಚಾರಪ್ರಚೋದಕ ಬರಹಗಳನ್ನೋದಿದ ಪ್ರಭಾವದಿಂದಾಗಿ ನಿಶಿತಮತಿಯಾದ ಸಿದ್ಲಿಂಗನು ವರದಕ್ಷಿಣೆ, ಕಂದಾಚಾರ, ಮೂಢನಂಬಿಕೆ ಮುಂತಾದ ಸಾಮಾಜಿಕ ಅನಿಷ್ಟಗಳ ವಿರೋಧಿಯಾಗಿದ್ದನು. ಸಾಲದ್ದಕ್ಕೆ ಓದಿನಲ್ಲಿ ಚುರುಕಾಗಿದ್ದ ಆತನು ಎಲ್ಲ ಪರೀಕ್ಷೆಗಳನ್ನು ಸುಲಭವಾಗಿ ಜಯಿಸಿ ಖಾಸಗಿ ಬ್ಯಾಂಕೊಂದರ ಮ್ಯಾನೇಜರ್ ಹುದ್ದೆ ಅಲಂಕರಿಸಿದ್ದನು.

ಎಲ್ಲ ಯುವಕರಂತೆ ಸಿದ್ಲಿಂಗನು ಕೂಡಾ ತಾನು ಮದುವೆಯಾಗುವ ಹುಡುಗಿ ಮೈ ತುಂಬಾ ಸೀರೆ ಉಟ್ಟು, ಹಣೆಗೆ ಕುಂಕುಮದ ಬೊಟ್ಟಿಟ್ಟು, ಕೈ ತುಂಬಾ ಬಳೆ ತೊಟ್ಟು, ತಲೆಯಲ್ಲಿ ಮಲ್ಲಿಗೆ ಮುಡಿದು, ತಾನಾಡುವ ಮಾತುಗಳಿಗೆ ನಾಚಿ ನೀರಾಗುವಷ್ಟು ಒಳ್ಳೆಯವಳಾಗಿರಬೇಕು ಎಂದೆಲ್ಲ ಕನಸು ಕಾಣುತ್ತಿದ್ದನು. ಹಾಗಾಗಿಯೇ ತನ್ನ ಬ್ಯಾಂಕಿನಲ್ಲಿ ಕೆಲಸ ಮಾಡುವ ಅಥವಾ ಸುತ್ತ ಮುತ್ತ ಸುಳಿದಾಡುವ ಬಣ್ಣದ ಚಿಟ್ಟೆಗಳನ್ನು ಕಣ್ಣೆತ್ತಿ ಕೂಡಾ ನೋಡದೇ ಇರುತ್ತಿರ್ಪ ಸದ್ಗುಣಿಯಾಗಿದ್ದನು. ಹೀಗಾಗಿಯೇ ಅವನನ್ನು ಮಹಿಳಾಮಣಿಗಳೆಲ್ಲಾ ಗೂಬೆ, ಸಿಡುಕ, ಮುಷುಂಡಿ ಮುಂತಾದ ಅಭಿವಾದನಗಳಿಂದ ಸಂಬೋಧಿಸುತ್ತಿದ್ದರು.

ಇಂತಿಪ್ಪ ಪುರುಷಪುಂಗವನಿಗೆ ಮದುವೆ ಫಿಕ್ಸ್ ಆಯ್ತೆಂಬುದೇ ಅವನ ಸುತ್ತಮುತ್ತ ಇರೋರನ್ನೆಲ್ಲಾ ರೋಮಾಂಚನಗೊಳಿಸಿತ್ತು.

★★★

ತನ್ನಂಥ ಅಷ್ಟಾವಕ್ರನ ಕೈ ಹಿಡಿಯಲು ಯಾವ ಕನ್ಯಾಮಣಿಯೂ ಮುಂದೆ